# ತಾಯ್ತನ

ಕೆಲವೇ ತಿಂಗಳುಗಳ ಹಿಂದೆ ಲೋಕಸುಂದರಿಯ ಪಟ್ಟವನ್ನು ಧರಿಸಿದ ಮಾನುಷಿ ಛಿಲ್ಲರ್‌ಗೆ ಕೇಳಿದ ಪ್ರಶ್ನೆ: 'ಲೋಕದಲ್ಲಿ ಅತ್ಯಂತ ಬೆಲೆ ಕಟ್ಟಲರ್ಹವಾದ ಕೆಲಸ ಯಾವುದು?' ಅದಕ್ಕೆ ಅವಳು ನೀಡಿದ ಉತ್ತರ: 'ತಾಯ್ತನ'! ಆಕೆ ನೀಡಿದ ಉತ್ತರದಿಂದ ಮಾನುಷಿ ಛಿಲ್ಲರ್ ಲೋಕಸುಂದರಿಯ ಕಿರೀಟ ಧರಿಸಿದ್ದೇನೋ ಸರಿ. ಆದರೆ, 'ತಾಯ್ತನ'ವೆಂಬುದು ಬೆಲೆ ಕಟ್ಟಲರ್ಹವಾದ ಕೆಲಸ ಮಾತ್ರವಲ್ಲ; ಅದು ಬೆಲೆಯನ್ನೇ ಕಟ್ಟಲಾರದಂಥ ಮೌಲ್ಯಭರಿತ ಸ್ತ್ರೀಪಾತ್ರ. ಗಂಡಸು ಏನೇ ಸರ್ಕಸ್ಸು ಮಾಡಿದರೂ ಧರಿಸಲಾರದಂಥ, ನಿಭಾಯಿಸಲಾರದಂಥ ಅತ್ಯಂತ ತ್ರಾಸದಾಯಕ ಪಾತ್ರ.

ಮಗುವಿನ ಸೃಷ್ಟಿಯಲ್ಲಿ ಗಂಡುಹೆಣ್ಣುಗಳ ಸಮಾನ ಪಾತ್ರ ಇರುತ್ತದೆ. ಆದರೂ, ತನ್ನ ಅಂಡಕ್ಕೆ ಪುರುಷನ ವೀರ್ಯಾಣುವನ್ನು ಸೇರಿಸಿಕೊಂಡು ಅದಕ್ಕೊಂದು ಜೀವತುಂಬುವ, ರೂಪ ತುಂಬುವ ಕೆಲಸವನ್ನು ಸ್ತ್ರೀ ಮಾತ್ರ ಮಾಡಬಲ್ಲಳು. ಆ ಶಕ್ತಿ ಹೆಣ್ಣಿಗೆ ಮಾತ್ರ ಇರುವಂಥದ್ದು. ಇದು ಪ್ರಾಣಿಲೋಕದ ಸಕಲ ಜೀವ ಜಂತುಗಳಿಗೂ ಅನ್ವಯಿಸುತ್ತದೆ. ತನ್ನ ಗರ್ಭದಲ್ಲಿ ಧರಿಸಿ ಬೆಳೆಸಿ ಹೆತ್ತ ನಂತರ ಬರುವ ಪಾಲನೆಯ ಜವಾಬ್ದಾರಿ ಅತ್ಯಂತ ಕಠಿಣ ಬಗೆಯದು.

ಪಕ್ಷಿಲೋಕದಲ್ಲಿ ಮಕ್ಕಳ ಪಾಲನೆಯನ್ನು ಬಹುಪಾಲು ದಂಪತಿಗಳು ನಿರ್ವಹಿಸುತ್ತವೆ. ಆದರೆ, ಪ್ರಾಣಿಲೋಕದಲ್ಲಿ ಮಗುವಿನ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ಹೆಣ್ಣಿನೊಡನೆ ಅಷ್ಟೋ ಇಷ್ಟೋ ಹಂಚಿಕೊಳ್ಳುವವನು ಗಂಡು ಮಾತ್ರ. ಆದರೆ, ಇದಕ್ಕೂ ಒಂದು ಮಿತಿ ಇರುತ್ತದೆ. ಅವನು ಆಹಾರ ಪೋಷಾಕುಗಳನ್ನು ಒದಗಿಸಬಲ್ಲವನಾಗಬಲ್ಲನೇ ಹೊರತು, ಮಗುವಿನ ಲಾಲನೆ–ಪಾಲನೆ ಮಾಡುವ ಶಕ್ತಿಯಲ್ಲಿ ತನ್ನ ಸಂಗಾತಿಗೆ ಸರಿಯಾಗಲಾರ. ಅದಕ್ಕೆ ಸ್ತ್ರೀ ಪುರುಷ ಸೃಷ್ಟಿಯಲ್ಲೇ ಇರುವ ನಿಗೂಢಾತ್ಮಕ ಜೈವಿಕ ರಚನೆಯೇ ಕಾರಣವಾಗಿದೆಯೆಂದು ತೋರುತ್ತದೆ. ಹೆಣ್ಣು ಗರ್ಭಧರಿಸಿ ರಕ್ತಮಾಂಸ ತುಂಬಿ ಬೆಳೆಸಿ ಹೆತ್ತ ನಂತರ, ಅದು ಸ್ವತಂತ್ರವಾಗಿ ತನ್ನನ್ನು ತಾನು ನಿಭಾಯಿಸಿಕೊಳ್ಳುವಷ್ಟು ಸಮರ್ಥವಾಗುವ ತನಕ, ಅದನ್ನು ಪಾಲಿಸಿ ಪೋಷಿಸಿ ಬೆಳೆಸುವ ನಿರಂತರ ಜವಾಬ್ದಾರಿಯುತ ಕ್ರಿಯೆಯೇ ತಾಯ್ತನ. ಇಲ್ಲಿ ಕೇವಲ ಪ್ರೀತಿ ಭಾವನೆಗಳೇ ತುಂಬಿರುವುದಿಲ್ಲ. ತಾಯ್ತನಕ್ಕೆ ವಿಶೇಷವಾದ ಸಹನೆ ಮತ್ತು ತಾಳಿಕೆಗಳು ಬೇಕಾಗುತ್ತವೆ. ಲೋಕದ ಯಾವ ವಾಸನೆಯೂ ಗೊತ್ತಿಲ್ಲದ ಮಗುವು ಎಲ್ಲ ಬಗೆಯ ಭಾವ ಭಾಷೆಗಳ ಸಂಬಂಧಜಾಲಗಳನ್ನು ತನ್ನ ತಾಯಿಯ ಮೂಲಕವೇ ಅರಿಯುತ್ತಾ ಸಾಗುತ್ತದೆ. ಅದೇ ಕರುಳಬಳ್ಳಿಯ ಶಕ್ತಿ, ಸಂಬಂಧ! ತಾಯಿಯೇ ತನ್ನ ರಕ್ತ ಮಾಂಸ, ನರವ್ಯೂಹ, ಭಾವಕೋಶಗಳಿಂದ ಧಾರೆಯೆರೆದು ಆಕಾರಗೊಳಿಸಿದ ಆ ಮಗು ಕಣ್ಣುಬಿಟ್ಟ ನಂತರ ಮೊದಲು ಗುರುತಿಸುವುದೇ ತನ್ನ ತಾಯಿಯನ್ನು! ತಾಯಿ

ಮೂಲ ಮಣ್ಣು– ಮಗು ಅದರಿಂದ ಹೊರಬಂದ ಪುಟ್ಟ ಉಂಡೆಮಣ್ಣು! ಸಮಾನ ಜೈವಿಕ ಸಂರಚನೆ; ಸಮಾನ ಭಾವಬಂಧ ಅದಕ್ಕೇ ಚಿಕ್ಕದು ದೊಡ್ಡದನ್ನು ಅವಲಂಬಿತವಾಗಿರುತ್ತದೆ, ದೊಡ್ಡದು ಚಿಕ್ಕದನ್ನು ಆತುಕೊಳ್ಳುತ್ತದೆ, ತಬ್ಬಿಕೊಳ್ಳುತ್ತದೆ. ಒಂಬತ್ತು ತಿಂಗಳು ತನ್ನ ಉಸಿರು, ಆಹಾರವನ್ನು ಗರ್ಭದಲ್ಲೇ ಹಂಚಿಕೊಂಡ ತಾಯಿಯ ಎದೆ ಹಾಲು ತುಂಬಿ ಬಾತುಕೊಳ್ಳುತ್ತದೆ. ಏಕೆಂದರೆ, ಇದು ಭಾವಬಂಧಯುಕ್ತವಾದ ಜೈವಿಕ ಪ್ರವೃತ್ತಿ. ತನ್ನ ತೆಕ್ಕೆಯಲ್ಲಿರುವ ತನ್ನದೇ ಕೂಸು ಅಸಹಾಯಕವಾಗಿದೆ, ಅದು ಸ್ವತಂತ್ರವಾಗಿ ತನ್ನನ್ನು ತಾನು ನಿಭಾಯಿಸಿಕೊಳ್ಳುವ ತನಕ ತಾನೇ ಅದನ್ನು ಬೆಳೆಸಬೇಕೆಂಬ ಪ್ರವೃತ್ತಿ ಜಾಗೃತವಾಗುತ್ತದೆ. ಹೀಗೆ ಜಾಗೃತವಾದ ಜೈವಿಕ ಮತ್ತು ಭಾವರೂಪವೇ ತಾಯ್ತನ. ಈ ಗುಣ ಸಕಲ ಜೀವ ಜಂತುಗಳಲ್ಲೂ ಇರುವಂಥದು. ಆ ಶಕ್ತಿ ಗಂಡಸಿನಲ್ಲಿರುವುದಿಲ್ಲವೆಂಬುದು ವಾಸ್ತವಸತ್ಯ. ಅಪರೂಪಕ್ಕೆ ಅದು ಕಂಡು ಬಂದರೂ ಅದು ಕುಟುಂಬ ವ್ಯವಸ್ಥೆಯ ರೂಪಿತಪ್ರಜ್ಞೆ ಮತ್ತು ಭಾವನಾತ್ಮಕ ಸಂಬಂಧದಿಂದುಂಟಾದ ಜವಾಬ್ದಾರಿಯ ಅಭಿವ್ಯಕ್ತಿ ಮಾತ್ರ.

ಪ್ರಾಣಿ, ಪಕ್ಷಿ ಸಂಕುಲಗಳಲ್ಲಿ ಹೆಣ್ಣಿಗೆ ತಾಯ್ತನದ ಅಭೀಪ್ಸೆ ಫಲವತ್ತತೆ ಮೂಡಿದ ತಕ್ಷಣ ಜಾಗೃತವಾಗುತ್ತದೆ. ಅದರ ಈಡೇರಿಕೆಗಾಗಿ ಗಂಡು ಸಂಗಾತಿಯ ಸಾಂಗತ್ಯ ಬಯಸುವ ಜೈವಿಕ ವಿಶೇಷಗಳು ಹೆಣ್ಣಿನ ಮೈನಿಂದ ಹೊರಸೂಸುತ್ತವೆ. ಮದುವೆಯಾಗಿಯೇ ಅದನ್ನು ಈಡೇರಿಸಿಕೊಳ್ಳಬೇಕಾದ ಪ್ರವೃತ್ತಿ ಕುಟುಂಬ ವ್ಯವಸ್ಥೆ ಆರಂಭವಾದ ನಂತರ ಮಾನವ ಕುಲದಲ್ಲಿ ಜಾರಿಗೆ ಬಂದಿದೆ. ಇದು ಮನುಷ್ಯ ಕಟ್ಟಿಕೊಂಡ ಆಚರಣೆ. ಈ ಆಚರಣೆ, ಕಟ್ಟಳೆಯನ್ನೂ ಮೀರಿ ತಾಯ್ತನವನ್ನು ಭರಿಸಿದ ಉದಾಹರಣೆಗಳು ಚರಿತ್ರೆಯುದ್ದಕ್ಕೂ ಇವೆ. ತನ್ನೊಳಗೆ ಉತ್ಪನ್ನವಾಗುವ ಅಂಡಾಣುಗಳು ಪುರುಷ ಸಂಗಾತಿಯ ಸಾಂಗತ್ಯವಿಲ್ಲದೆ ವಿಫಲವಾಗಿ ಹೊರಹೋಗುವ ಪ್ರಕ್ರಿಯೆಯನ್ನು ಹೆಣ್ಣಿನ ಜೈವಿಕ ಪ್ರಕ್ರಿಯೆ ಒಪ್ಪಲಾಗದು. ಆ ಕಾರಣವಾಗಿ ಅದು ಗಂಡು ಸಂಗಾತಿಯನ್ನು ಸೆಳೆದು ಸೇರಲು ನಾನಾ ವಿಧದ ಅಭಿವ್ಯಕ್ತಿ ರೂಪತಳೆಯುತ್ತದೆ.

ಜನಿಸುವ ಮಗುವಿಗೆ 'ಇವನೇ ತಂದೆ'ಯೆಂಬ ಗುರುತೂ ಕೂಡ ಕುಟುಂಬ ವ್ಯವಸ್ಥೆ ತಂದುಕೊಟ್ಟಿರುವ ಸಂಗತಿ. ಅದನ್ನು ಪ್ರಾಣಿ ಸಂಕುಲಗಳಲ್ಲಿ ಕಾಣುವುದು ತೀರಾ ಅಪರೂಪ. ಆಧುನಿಕ ಯುಗದಲ್ಲಿ ವೀರ್ಯಕೋಶ (ಸ್ಪರ್ಮ್ ಬ್ಯಾಂಕ್) ದಲ್ಲಿ ವೀರ್ಯ ಪಡೆದು ತಾಯ್ತನ ಅನುಭವಿಸುವ ಹೆಂಗಳೆಯರಿಗೆ ಗಂಡು ಸಂಗಾತಿ ಇರುವುದಿಲ್ಲ; ಅದರಿಂದ ಜನಿಸುವ ಮಕ್ಕಳಿಗೆ ತಂದೆ ಯಾರೆಂದು ತಿಳಿಯುವುದೇ ಇಲ್ಲ.

ತಾಯ್ತನ ಹೆಣ್ಣಿಗೆ ಅಪಾರವಾದ ತಾಳ್ಮೆಯನ್ನೂ ಕಷ್ಟ ಭರಿಸುವ ಶಕ್ತಿಯನ್ನೂ ಕಲಿಸುತ್ತದೆ. ಮಗುವಿನ ಅಸಹಾಯಕ ಅಳು, ಬೆಳೆಯುತ್ತಾ ಸಾಗುವ ರಚ್ಚೆ, ಹಠಮಾರಿತನಗಳು ಅವಳನ್ನು ಅನುದಿನವೂ ಪಕ್ವಗೊಳಿಸುತ್ತಾ ಸಾಗಿಸುತ್ತವೆ. ಒಂದರ್ಥದಲ್ಲಿ ಮಕ್ಕಳನ್ನು ಹೆತ್ತು ಪೋಷಿಸುವ ಅವಳ ವ್ಯಕ್ತಿತ್ವ ಪೂರ್ಣತೆಯ ಕಡೆ ಸಾಗುತ್ತದೆ. ಈ ವ್ಯಕ್ತಿತ್ವದ ತೂಕದ ಮಟ್ಟಿಗೆ ಗಂಡಿನ ತೂಕ ಬರಲಾರದು. ತಾಯ್ತನವೆಂಬುದು ಹೆಣ್ಣು ನಿರ್ವಹಿಸುವ ಬಹುಮುಖಿ ಪಾತ್ರಗಳಲ್ಲಿ ಅತ್ಯಂತ ಮುಖ್ಯವಾದುದು. ಇದೇ ಸಂದರ್ಭದಲ್ಲಿ 'ಒಬ್ಬ ತಾಯಿ ಹತ್ತು ಮಕ್ಕಳನ್ನು ಸಾಕಬಲ್ಲಳು; ಆದರೆ, ಅನೇಕ ಸಂದರ್ಭಗಳಲ್ಲಿ ಹತ್ತು ಮಕ್ಕಳು ಒಬ್ಬ ತಾಯಿಯನ್ನು ಸಾಕಲಾರರು' ಎಂಬ ಅನುಭವೋಕ್ತಿ ನೆನಪಾಗುತ್ತದೆ.

■ **ಶಿಕಾಕು**

## ಮಾತೇ ಮುತ್ತು

★ ಒಂದು ರಾಜ್ಯವನ್ನು ಕಟ್ಟಲು ಸಾವಿರ ವರ್ಷಗಳು ಬೇಕಾಗಬಹುದು. ಆದರೆ ಅದು ನಾಶಗೊಳ್ಳಲು ಒಂದು ಗಂಟೆ ಸಾಕು.

–ಲಾರ್ಡ್ ಬೈರನ್

★ ನಾವು ಸಾಮಾಜಿಕ ಸ್ವಾತಂತ್ರ್ಯವನ್ನು ಸಾಧಿಸುವವರೆಗೆ ನಮಗೆ ಕಾನೂನು ಒದಗಿಸಿಕೊಟ್ಟ ಯಾವ ಸ್ವಾತಂತ್ರ್ಯವನ್ನೂ ಅನುಭವಿಸಲಾಗದು.

–ಬಾಬಾಸಾಹೇಬ್ ಅಂಬೇಡ್ಕರ್

★ ನಿಮ್ಮ ಮೋಕ್ಷವನ್ನು ನೀವೇ ಕಂಡುಕೊಳ್ಳಿ, ಇನ್ನೊಬ್ಬರ ಮೇಲೆ ಅವಲಂಬಿಸಬೇಡಿ.

–ಗೌತಮ ಬುದ್ಧ

★ ಶ್ರೀಮಂತರು ಕೇವಲ ಹಣ ಹಂಚಿದರೆ ಸಾಲದು, ಪಡೆಯುವಾತನಿಗೆ ತಮ್ಮ ಶ್ರೀಮಂತಿಕೆಯ ಗುಟ್ಟನ್ನೂ ಬಿಟ್ಟುಕೊಡಬೇಕು.

–ಬೆಂಜಮಿನ್ ಡಿಸ್ರೇಲಿ

★ ಇವತ್ತಿನ ಸಂತೋಷದ ಕ್ಷಣಗಳೇ ನಾಳೆಯ ವಿಷಾದದ ನೆನಪುಗಳಾಗುತ್ತವೆ.

–ಬಾಬ್ ಮಾರ್ಲೆ

★ ದುಃಖವನ್ನೂ ಸಮನಾಗಿ ಅನುಭವಿಸದಿದ್ದರೆ ಸಂತೋಷಕ್ಕೆ ಯಾವ ಅರ್ಥವೂ ಇರುವುದಿಲ್ಲ.

–ಕಾರ್ಲ್ ಜಂಗ್

★ ಮೌನ ನಿಮ್ಮ ನಿಜವಾದ ಗೆಳೆಯ. ಅದು ನಿಮಗೆ ಯಾವತ್ತೂ ಮೋಸ ಮಾಡುವುದಿಲ್ಲ.

–ಕನ್‌ಫ್ಯೂಷಿಯಸ್

★ ನಮ್ಮ ಶಕ್ತಿಗಿಂತ ಹೆಚ್ಚಿನದನ್ನು ನಮ್ಮ ತಾಳ್ಮೆ ಸಾಧಿಸುತ್ತದೆ.

–ಎಡ್ಮಂಡ್ ಬರ್ಕ್

★ ಸ್ವಯಂಶಿಸ್ತು ಎಂದರೆ ಸ್ನಾಯುಗಳಿದ್ದಂತೆ. ಹೆಚ್ಚು ಅಭ್ಯಾಸ ಮಾಡಿದಷ್ಟೂ ಹೆಚ್ಚು ದೃಢವಾಗುತ್ತದೆ.

–ಡೇನಿಯಲ್ ಗೋಲ್ಡ್‌ಸ್ಟೀನ್